ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,
ಹಗರಿಬೊಮ್ಮನಹಳ್ಳಿ

ಓ ಎಸ್ ನಂ. 88/2015

ಸಾಕ್ಷಿಗೆ ದಿನಾಂಕ 25-11-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1

| | | |
|---|---|---|
| ಹೆಸರು | : | ಬಸವರಾಜ ರೋಣದ್ |
| ತಂದೆಯ ಹೆಸರು | : | ಶಿವಸಂಗಪ್ಪ ರೋಣದ್ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಎ ಡಿ ಎಲ್ ಆರ್ |
| ವಾಸ ಸ್ಥಳ | : | ಹೆಚ್ ಬಿ ಹಳ್ಳಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 08-03-2021 ರಿಂದ ನಾನು ಹೆಚ್ ಬಿ ಹಳ್ಳಿಯಲ್ಲಿ ಎ ಡಿ ಎಲ್ ಆರ್ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮಾನ್ಯ ನ್ಯಾಯಾಲಯದ ಆದೇಶದಂತೆ ಕೋಟ್ ಕಮಿಷನರ್ ಕೆಲಸವನ್ನು ನಿರ್ವಹಿಸಲು ದಿಃ 05-12-2023 ರಂದು ನ್ಯಾಯಾಲಯದಿಂದ ಕಮಿಷನರ್ ವಾರೆಂಟ್ ನನಗೆ ತಲುಪಿರುತ್ತದೆ. ದಿಃ 11-12-2023 ರಂದು ನಾನು ವಾದಿ, ಪ್ರತಿವಾದಿ, ಮುಖ್ಯಾಧಿಕಾರಿಗಳು ಪರಸಭೆ ಇವರಿಗೆ ನೋಟಿಸನ್ನು ನೀಡಿ ಸದರಿ ವಿಚಾರವನ್ನು ತಮ್ಮ ತಮ್ಮ ವಕೀಲರುಗಳಿಗೆ ತಿಳಿಸಲು ಕೋರಿಕೊಂಡಿರುತ್ತೇನೆ. ದಿಃ 18-12-2023 ರಂದು ನಾನು ಕಮಿಷನರ್ ಕೆಲಸವನ್ನು ನಿರ್ವಹಿಸಿ ಮತ್ತು ದಿಃ 03-01-2024 ರಂದು ಅಳತೆ ಕೆಲಸವನ್ನು ಮುಕ್ತಾಯಮಾಡಿರುತ್ತೇನೆ. ನ್ಯಾಯಾಲಯದಿಂದ ಬಂದಿರುವ ಕಮಿಷನರ್ ವಾರೆಂಟ್, ಅಸಲು ಅರ್ಜಿ, ಮಧ್ಯಂತರ ಅರ್ಜಿ ನಂ.11, ಪ್ರತಿವಾದಿ ನಂ.2 ರವರ ತಕರಾರು, ಎಂ ಓ ಐ, ಅಳತೆ ಕಾಲದಲ್ಲಿ ಪಕ್ಷಗಾರರು ಹಾಜರುಪಡಿಸಿದ ಕ್ರಯಪತ್ರ, ಕಚ್ಚಾ ನಕಾಶೆಗಳು ಇವುಗಳ ಪ್ರತಿಗಳೊಂದಿಗೆ ಒಟ್ಟು 72 ಪುಟಗಳ ಕಮಿಷನರ್ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಅದನ್ನು ಒಟ್ಟಾರೆಯಾಗಿ ನಿಸಿ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ